**ಒ.ಎಸ್ ನಂ. 125/2020 , ಪಿಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕಃ17–07–2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀಃ ಹೆಚ್.ಎಸ್.ಎಂ, ಪ್ರತಿವಾದಿ ಪರ ವಕೀಲರಿಂದಃ**

1. ನಮ್ಮ ತಂದೆ ಡೇವಿಡ್ ರೇಗೋ ರವರಿಗೆ ನಾವು 6 ಜನ ಮಕ್ಕಳು. ಅವರೆಂದರೆ ನಾನು, ಪ್ರತಿವಾದಿ 13, 14, 15 ಮತ್ತು ವಿಕ್ಟರ್ ರೇಗೋ ಮತ್ತು ಸೈಮನ್ ರೇಗೋರವರಾಗಿರುತ್ತೇವೆ. ನನಗೆ 1966 ನೇ ಸಾಲಿನಲ್ಲಿ ಮದುವೆಯಾಗಿರುತ್ತದೆ. ನನ್ನ ಗಂಡನ ಮನೆ ಮಂಗಳೂರಿನ ಕುಲಶೇಖರದಲ್ಲಿ ಆಗಿರುತ್ತದೆ. ಮದುವೆಯಾದ ಲಾಗಾಯ್ತಿನಿಂದಲೂ ನಾನು ನನ್ನ ಗಂಡನ ಮನೆಯಲ್ಲಿ ವಾಸವಾಗಿರುತ್ತೇನೆ. ಪ್ರತಿವಾದಿ 14 ರವರ ಅವರ 20 ನೇ ವಯಸ್ಸು ಪ್ರಾಯದಲ್ಲಿ ಮದುವೆಯಾಗಿರುತ್ತಾರೆ. ಅವರ ಗಂಡನ ಮನೆಯು ಕಾರ್ಕಳ ತಾಲೂಕಿನ ಸಾಣೂರು ಎಂಬ ಸ್ಥಳದಲ್ಲಿ ಆಗಿರುತ್ತದೆ. ಅವರ ಮದುವೆಯಾದ ಲಾಗಾಯ್ತಿನಿಂದಲೂ ಅವರು ಅವರ ಗಂಡನ ಮನೆಯಲ್ಲಿ ವಾಸವಾಗಿರುತ್ತಾರೆ. ನನ್ನ ಮತ್ತು 15 ನೇ ಪ್ರತಿವಾದಿಯ ಮದುವೆಯು ಒಂದೇ ದಿನ ಆಗಿರುತ್ತದೆ. ಅವರ ಗಂಡನ ಮನೆಯು ಧರೆಗುಡ್ಡೆ ಗ್ರಾಮದಲ್ಲಿ ಇರುತ್ತದೆ.

2. ನಿಮ್ಮ ಮದುವೆ ಸಮಯದಲ್ಲಿ ನಿಮ್ಮ ಸಹೋದರರಾದ ವಿಕ್ಟರ್ ರೇಗೋ ಸೈಮನ್ ರೇಗೋ ಮತ್ತು ಪ್ರತಿವಾದಿ 13 ರವರು ಹಣ ಒಟ್ಟುಗೂಡಿಸಿ ನಿಮ್ಮ ಮದುವೆ ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನನ್ನ ತಂದೆ–ತಾಯಿ ಮತ್ತು ಮೂವರು ಸಹೋದರರು ದಾವಾ ಆಸ್ತಿಯಲ್ಲಿಯೇ ವಾಸಮಾಡಿಕೊಂಡಿದ್ದರು. ನಾನು ದಾವಾ ಆಸ್ತಿಗೆ ನಮ್ಮ ತಾಯಿಯ ಜೀವಿತ ಅವಧಿಯವರೆಗೆ ಬಂದು ಹೋಗುತ್ತಲೇ ಇದ್ದೆನು.

3. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿ ಪ್ರತಿವಾದಿ 10 ರವರ ಮನೆಯಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಫೋಟೋವನ್ನು ನಿಡಿ–1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಫೋಟೋವನ್ನು ತೋರಿಸಿ ಪ್ರತಿವಾದಿ 4 ರವರ ಮನೆಯಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಫೋಟೋವನ್ನು ನಿಡಿ–2 ಎಂದು ಗುರುತಿಸಲಾಯಿತು. ನಾನು ಅಂತೋನಿ ರೇಗೋ ರವರ ಗೃಹಪ್ರವೇಶಕ್ಕೆ ಹೋಗಿರುವುದಿಲ್ಲ.

4. ನಾನು ದಾವಾ ಆಸ್ತಿಗೆ ಕೊನೆಯದಾಗಿ 2020 ನೇ ಸಾಲಿನಲ್ಲಿ ಹೋಗಿರುತ್ತೇನೆ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿ ಅದರಲ್ಲಿ ಕಂಡು ಬರುವ ಕಟ್ಟಡವು ನಿಮ್ಮ ಸಹೋದರ ಸೈಮನ್ ರವರು ಕಟ್ಟಿದ ಮನೆಯಾಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅವುಗಳನ್ನು ಕ್ರಮವಾಗಿ ನಿಡಿ–3 ಮತ್ತು ನಿಡಿ–4 ಎಂದು ಗುರು ತಿಸಲಾಯಿತು. ಸಾಕ್ಷಿಗೆ ಮತ್ತೊಂದು ಫೋಟೋವನ್ನು ತೋರಿಸಿ ಪ್ರತಿವಾದಿ 12 ರವರು ದಾವಾ ಆಸ್ತಿಯಲ್ಲಿ ನಡೆಸಿಕೊಂಡಿರುವ ಸರ್ವೀಸ್ ಸ್ಟೇಷನ್ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಫೋಟೋವನ್ನು ನಿಡಿ–5 ಎಂದು ಗುರುತಿಸಲಾಯಿತು.

5. ನಿಮ್ಮ ತಂದೆಯವರು ತೀರಿಹೋದ ನಂತರ ನಿಮ್ಮ ತಾಯಿಯವರು ಮತ್ತು ಮೂರು ಜನ ಸಹೋದರರರು ದಾವಾ ಆಸ್ತಿಯನ್ನು ಪಾಲು ಮಾಡಿಕೊಂಡು ಅನುಭವಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ನಮ್ಮಲ್ಲಿ ಕೇಳದೆ ಅವರು ಪಾಲು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಅದೇ ರೀತಿ ಸದರಿ ನಾಲ್ವರ ಹೆಸರಿನಲ್ಲಿ

ಆರ್.ಟಿ.ಸಿ ಬದಲಾಗಿರುತ್ತದೆ. ತಾಯಿಯವರ ಮತ್ತು ವಿಕ್ಟರ್ ರೇಗೋರವರ ಹೆಸರಿನಲ್ಲಿ ಇಟ್ಟಂತಹ ಆಸ್ತಿಯು ತಾಯಿಯ ಮರಣಾನಂತರ ವಿಕ್ಟರ್ ರೇಗೋ ರವರ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಾನು ಮತ್ತು ನನ್ನ ಸಹೋದರಿಯವರು ದಾವಾ ಆಸ್ತಿಗಳಲ್ಲಿ ವಿಶೇಷ ಕಾರ್ಯಗಳು ಏನಾದರೂ ಇದ್ದಲ್ಲಿ ನಾವು ದಾವಾ ಆಸ್ತಿಗೆ ಬಂದು ಹೋಗುತ್ತೇವೆ. ನಾವು ಮದುವೆಯಾದ ಕಾಲದಿಂದಲೂ ಕೂಡ ಈ ದಿನದವರೆಗೂ ಇದೇ ರೀತಿ ನಡೆದುಕೊಂಡಿರುತ್ತೇವೆ.

6. ನನ್ನ ಸಹೋದರರು ದಾವಾ ಆಸ್ತಿಗಳಲ್ಲಿ ಕಟ್ಟಡಗಳನ್ನೆಲಾ ಕಟ್ಟಿಕೊಂಡು ಪ್ರತ್ಯೇಕವಾಗಿ ಅವರವರ ಸ್ವಾಧೀನವನ್ನು ಅನುಭವಿಸಿಕೊಂಡಿರುತ್ತಾರೆ. ದಾವಾ ಆಸ್ತಿಯಿಂದ ಬರುವ ಉತ್ಪತ್ತಿಗಳನ್ನು ನನ್ನ ಮತ್ತು ನನ್ನ ಸಹೋದರಿಯರ ಮದುವೆಯ ನಂತರ ನಮಗೇನೂ ನೀಡುತ್ತಿರುವುದಿಲ್ಲ. ಅದನ್ನು ಸಹೋದರರೇ ತೆಗೆದುಕೊಳ್ಳುತ್ತಿದ್ದಾರೆ.

7. ಸೈಮನ್ ರೇಗೋ ರವರು ದಾವಾ ಆಸ್ತಿಯಲ್ಲಿ ಒಂದು ಮನೆಯನ್ನು ಕಟ್ಟಿಕೊಂಡಿರುತ್ತಾರೆ. 13 ನೇ ಪ್ರತಿವಾದಿಯು ಅವರ ಪಾಲಿನ ಆಸ್ತಿಗೆ ಆವರ ಗೋಡೆಯನ್ನು ಹಾಕಿ ಅವರ ಸ್ವಾಧೀನದಲ್ಲಿ ಇರಿಸಿಕೊಂಡಿರುತ್ತಾರೆ. ಸೈಮನ್ ರೇಗೋ ರವರು ಸ್ವಲ್ಪ ಆಸ್ತಿಯನ್ನು 16 ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿರುತ್ತಾರೆ. ವಿಕ್ಟರ್ ರೇಗೋ ರವರು ಅವರ ಸ್ವಲ್ಪ ಆಸ್ತಿಯನ್ನು ಅವರ ಮಗನಾದ 9 ನೇ ಪ್ರತಿವಾದಿಗೆ ವ್ಯವಸ್ಥಾಪತ್ರದ ಮುಖಾಂತರ ನೀಡಿರುತ್ತಾರೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಿಕ್ಟರ್ ರೇಗೋ ರವರು 9 ನೇ ಪ್ರತಿವಾದಿಗೆ ನೀಡಿದಂತಹ ಸ್ಥಳದಲ್ಲಿ 9 ನೇ ಪ್ರತಿವಾದಿಯು ಮನೆ ಕಟ್ಟಿಕೊಂಡಿರುತ್ತಾರೆ. ಸೈಮನ್

ರೇಗೋ ರವರ ಮಕ್ಕಳು ಅವರ ಪಾಲಿನಲ್ಲಿ ಇದ್ದಂತಹ ಸ್ಥಳದಲ್ಲಿ ಅವರ ಮಕ್ಕಳು ದಾಖಲಾತಿಗಳನ್ನು ಮಾಡಿಕೊಂಡು ಸದರಿ ಸ್ಥಳಗಳನ್ನು ಅವರೇ ಅನುಭವಿಸಿಕೊಂಡಿರುತ್ತಾರೆ. ದಾವಾ ಆಸ್ತಿಯ ಯಾವ ಭಾಗವೂ ಕೂಡ ನನ್ನ ಮತ್ತು ಪ್ರತಿವಾದಿ 14, 15 ರವರ ಸ್ವಾಧೀನದಲ್ಲಿ ಇರುವುದಿಲ್ಲ.

8. ಈ ದಾವೆಯನ್ನು ದಾಖಲಿಸುವ ಕಾಲಕ್ಕೆ ದಾವಾ ಆಸ್ತಿಯ ಒಂದು ಸೆಂಟ್ಸ್ ಜಾಗಕ್ಕೆ ಎಷ್ಟು ರೂಪಾಯಿ ಬೆಲೆ ಬಾಳುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ನಮ್ಮ ತಂದೆ–ತಾಯಿಯವರ ಮರಣಾನಂತರ ದಾವಾ ಆಸ್ತಿಗೆ ಸಂಬಂಧಿಸಿದ ತೀರುವೆಯನ್ನು ನಮ್ಮ ಸಹೋದರರೇ ಕಟ್ಟಿಕೊಂಡಿರುತ್ತಾರೆ. ನಾವು ಯಾವುದೇ ತೀರುವೆಯನ್ನು ಪಾವತಿಸಿರುವುದಿಲ್ಲ. ನಿಮ್ಮ ತಂದೆಯವರ ಮರಣಾನಂತರ ದಾವಾ ಆಸ್ತಿಗಳು ಪಾಲಾಗಬೇಕು ಎಂದು ನಿಮ್ಮ ಸಹೋದರರಲ್ಲಿ ನೀವು ಕೇಳಿಕೊಂಡಿದ್ದು ಇದೆಯೋ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆ–ತಾಯಿಯವರು ತೀರಿಹೋದ ನಂತರ ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳಲ್ಲಿ ನಮ್ಮ ಹೆಸರು ಬರಬೇಕು ಎಂದು ನಾವು ಅರ್ಜಿ ಸಲ್ಲಿಸಿರುವುದಿಲ್ಲ. ನಾನು ಮತ್ತು ಪ್ರತಿವಾದಿ 14 ಮತ್ತು 15 ರವರು ಒಳ್ಳೆಯ ರೀತಿಯ ಸಂಬಂಧದಲ್ಲಿ ಇದ್ದೇವೆ. ನಿಮಗೆ ದಾವಾ ಆಸ್ತಿಯಲ್ಲಿ ಪಾಲು ಕೇಳುವ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪಾಲಗತಕ್ಕ ಆಸ್ತಿಗಳಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಪ್ರತಿವಾದಿ 16 ಮತ್ತು 19 ರವರ ಪರ ಯಾರು ಹಾಜರಿಲ್ಲದ ಕಾರಣ ಪಾಟೀಸವಾಲು ಇಲ್ಲವೆಂದು ಪರಿಗಣಿಸಲಾಯಿತು.**

**(ಮರುವಿಚಾರಣೆ ಇಲ್ಲ.)**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/–

ವ್ಯ ನ್ಯಾ.ಮತ್ತು ಪ್ರ.ದ.ನ್ಯಾ.ದಂ. ಮೂಡಬಿದಿರೆ